ಹೃದಯ ಕುಂಜದ ಚೌಕಿಯಲ್ಲಿ ಅತಿಥಿಗಳ ಮತ್ತು ಬಾ ಕೊಠಡಿ





ಗಾಂಧೀಜಿಯವರ ಕೊಠಡಿ, ಎಡ ಭಾಗದ ಗೋಡೆಯಲ್ಲಿ ಸತ್ಯಾಗ್ರಹ ಚಕ್ರ



ಗಾಂಧೀಜಿಯವರು ಬಳಸುತ್ತಿದ್ದ ವಸ್ತುಗಳು

ಬಳಸುತ್ತಿದ್ದ ಸತ್ಯಾಗ್ರಹ ಚರಕ, ಕುಳಿತುಕೊಳ್ಳುತ್ತಿದ್ದ ಗಾದಿ, ಪತ್ರಗಳನ್ನು ಬರೆಯುತ್ತಿದ್ದ ಇಳಿಜಾರಿನ ಮೇಜು ಇವೆ. ವಿನೋಬಾ ಬಾವೆ ಸಿದ್ಧಪಡಿಸಿದ 'ಜೀವನ ಚಕ್ರ' ಎಂಬ ಸತ್ಯಾಗ್ರಹ ಚಕ್ರವು ಅವರ ತತ್ವಗಳನ್ನು ಪ್ರಚುರಪಡಿಸುತ್ತದೆ.

ಈ ಚಕ್ರದ ನಾಲ್ಕು ವಿಭಾಗಗಳಲ್ಲಿ ಒಂದೊಂದು ವಿಭಾಗದಲ್ಲೂ ಪ್ರತ್ಯೇಕವಾಗಿ ನಿರ್ದೇಶಿಸುವ ಅಂಶಗಳೆಂದರೆ; ಗುಡಿ ಕೈಗಾರಿಕೆ, ಸಮಾನತೆ, ಖಾದಿ, ಮಹಿಳಾ ಉದ್ಧಾರ, ಹರಿಜನ ಸೇವೆ, ಮಾತೃಭಾಷಾ ಪ್ರೇಮ, ಗ್ರಾಮೀಣ ಆರೋಗ್ಯ, ಮದ್ಯಪಾನ ನಿಷೇಧ, ಗ್ರಾಮೀಣ ಸ್ವಚ್ಛತೆ ಹಾಗೂ ಜಾತಿರಹಿತ ಸಮಾಜ. ಹೃದಯ ಕುಂಜದ ಬಲಕ್ಕೆ ಪುಟ್ಟ ಚೌಕಿ ಮನೆಯಂತಿರುವ ಅತಿಥಿ ಗೃಹ 'ನಂದಿನಿ' ಇದೆ. ಇಲ್ಲಿ ನೆಹರೂ, ರಾಜಾಜಿ, ರಾಜೇಂದ್ರ ಪ್ರಸಾದ್, ಠಾಗೋರ್, ಬಾದ್‌ಷಾ ಖಾನ್, ಹೆನ್ರಿ ಪೋಲಾಕ್, ಕಲೆನ್ ಬಾಕ್ ಮುಂತಾದ ಗಣ್ಯರು ತಂಗಿದ್ದರು. ಕಲ್ಲು ಹಾಸಿನ ಈ ಕೊಠಡಿ ಖಾಲಿ ಇತ್ತು. ಪಕ್ಕದ ಕಸ್ತೂರಿಬಾ ಕೊಠಡಿಯಲ್ಲಿ ಒಂದು ಪುಟ್ಟ ಮಡಿಚುವ ಮಂಚ, ಷೆಲ್ಫ್ ಹಾಗೂ ಒಂದು ಬೀರು ಇದ್ದವು. ಅಡುಗೆ ಕೋಣೆಯಲ್ಲಿ ಗಾಂಧೀಜಿಯವರ ನೆಚ್ಚಿನ ಮೂರು ಮಂಗಗಳ ಗೊಂಬೆ, ಚಪ್ಪಲಿ, ಕನ್ನಡಕ ಮತ್ತು ಅವರು ಯರವಾಡಾ ಜೈಲಿನಲ್ಲಿದ್ದಾಗ ಬಳಸುತ್ತಿದ್ದ ಒಂದು ಕೌಳಿಗೆ ಇದ್ದವು.

ವಿನೋಬಾ–ಮೀರಾ ಕುಟೀರದಲ್ಲಿ ವಿನೋಬಾ ಬಾವೆ ಮೂರು ವರ್ಷಗಳ ಕಾಲ ತಂಗಿದ್ದರು. ಆ ನಂತರದಲ್ಲಿ ಇಲ್ಲಿ ವಾಸವಾಗಿದ್ದವರು ಮೀರಾಬಹೆನ್. ಇವರು ಮೆಡಲೀನ್ ಸ್ಲೇಟ್ ಎಂಬ ಆಂಗ್ಲ ತರುಣಿ. ರೋಮೇಂ ರೋಲ್ಯಾಂಡರ ಪುಸ್ತಕದಿಂದ ಗಾಂಧಿ ತತ್ವಗಳೆಡೆ ಆಕರ್ಷಿತರಾಗಿ ಮುಂದೆ ಗಾಂಧೀಜಿಯವರ ಸೇವೆಗೆ ಸಮರ್ಪಿತರಾದವರು. ಹೀಗಾಗಿ ಈ ಕುಟೀರವು ಇಬ್ಬರ ಹೆಸರಿನಿಂದ ಗುರುತಿಸಲ್ಪಡುತ್ತದೆ.

ಇಲ್ಲಿನ 'ಮಗನ್ ನಿವಾಸ' ಗಾಂಧೀಜಿಯವರ ಬಂಧು, ದಕ್ಷಿಣ ಆಫ್ರಿಕಾದಿಂದಲೂ ಅವರ ಒಡನಾಡಿಯಾಗಿ ಮೊಟ್ಟ ಮೊದಲು ಗಾಂಧೀಜಿಯವರ ತತ್ವಗಳಿಗೆ ತಮ್ಮನ್ನು ಸಮರ್ಪಿಸಿಕೊಂಡ ಆದರ್ಶ ಸತ್ಯಾಗ್ರಹಿ ಹಾಗೂ ಈ ಆಶ್ರಮದ ಮ್ಯಾನೇಜರ್ ಆಗಿದ್ದ ಮಗನ್‌ಲಾಲರ ನಿವಾಸವಾಗಿತ್ತು. ಅವರು 1928 ರಲ್ಲಿ ನಿಧನರಾದಾಗ 'ಅವನ ಮರಣ ನನ್ನನ್ನು ವಿಧವೆಯಾಗಿಸಿದೆ' ಎಂದಿದ್ದರು ಗಾಂಧೀಜಿ. ಈ ದು:ಖತಪ್ತ ವಾಕ್ಯದ ಕಪ್ಪು ಶಿಲಾ ಫಲಕ ನಿವಾಸದ ಮುಂಭಾಗದಲ್ಲಿದೆ.

ಗಾಂಧೀಜಿಯವರ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಸ್ಮರಣಿಕೆಗಳ ಸಂಗ್ರಹ ಮಾತ್ರವೇ ಅಲ್ಲದೆ, ಗಾಂಧೀಜಿಯವರ ಜೀವನದ ವೈವಿಧ್ಯಮಯ ಚಾರಿತ್ರಿಕ ಘಟನೆಗಳ ನಿರೂಪಣೆ, ಪುಸ್ತಕಗಳು, ಹಸ್ತಪ್ರತಿಗಳು, ಛಾಯಾಪ್ರತಿಗಳು, ಸ್ವಾತಂತ್ರ್ಯ ಹೋರಾಟದ ಪ್ರಮುಖ ಚಟುವಟಿಕೆಗಳೆಲ್ಲದರ ಸಂಗ್ರಹ ಮತ್ತು ಪ್ರಾತ್ಯಕ್ಷಿಕೆ ಆಶ್ರಮದಲ್ಲಿದೆ. ಇಲ್ಲಿ ಗಾಂಧೀಜಿಯವರ ಆಶ್ರಮ ಜೀವನವನ್ನು